**<u>ಅಸಲು ದಾವಾ ಸಂಖ್ಯೆ - 205/2020</u>** **ಡಿ.ಡಬ್ಲ್ಯೂ:-1**

ದಿನಾಂಕಃ **16.09.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

ಕ್ರಿಮಿನಲ್ ಮಿಸ್ ನಂ.203/2018 ರ ಪ್ರಕರಣದಲ್ಲಿ ಅಮೃತ ಎಂಬುವವರು ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ಸದರಿ ಪ್ರಕರಣವನ್ನು ಸಲ್ಲಿಸುವ ಸಮಯದಲ್ಲಿ ಮತ್ತು ರಾಜಿ ಮಾಡಿಕೊಂಡ ಸಮಯದಲ್ಲಿ ಅಶ್ವಿನಿ ಎಂ ಇ ರವರಿಗೆ ಮದುವೆಯಾಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣದ ರಾಜಿ ಅರ್ಜಿಯಲ್ಲಿ ಹಾಲಮ್ಮರವರಿಗೆ ರೂ.1,00,000/- ಮತ್ತು ಅಶ್ವಿನಿ ರವರಿಗೆ ರೂ.80,000/- ಜೀವನಾಂಶ ಬಾಬ್ತು ಹಣ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಹಣವು ಜೀವನಾಂಶ ಮತ್ತು ಭಾಗಾಂಶದ ಹಣವಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-5 ರಾಜಿ ಅರ್ಜಿಯಲ್ಲಿ ಜೀವನಾಂಶ ಎಂದು ನಮೂದಾಗಿದೆ ಹೊರತು ಭಾಗಾಂಶದ ಹಣ ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಡಿ-5 ರಾಜಿ ಅರ್ಜಿಯಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ಜೀವನಾಂಶ ಕೋರಿ ಯಾವುದೇ ನ್ಯಾಯಾಲಯದಲ್ಲಿ ದಾವೆಯನ್ನು ಹೂಡುವುದಿಲ್ಲ ಎಂದು ಪರಸ್ಪರ ಒಪ್ಪಿಕೊಂಡು ಮಾಡಿಕೊಂಡ ರಾಜಿ ಸಂದಾನದ ಅರ್ಜಿ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಭಾಗಾಂಶದ ಬದಲಾಗಿ ಹಣವನ್ನು ಪಡೆದುಕೊಂಡಿದ್ದರೆ ಹಿಸ್ಸೆಯ ಬದಲಾಗಿ ಹಣವನ್ನು ಪಡೆದುಕೊಂಡಿದ್ದಾರೆ ಎಂದು ನಮೂದಾಗುತ್ತಿತ್ತು ಎಂದರೆ ಸರಿಯಲ್ಲ. ಸದರಿ ಅರ್ಜಿಯಲ್ಲಿ ಅಮೃತನಿಗೆ ಯಾವುದೇ ಭಾಗಾಂಶದ ಹಣವನ್ನು ಕೊಟ್ಟ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹಾಲಮ್ಮರವರು ತನ್ನ ಇಬ್ಬರು ಮಕ್ಕಳ ಪರವಾಗಿ ಹಣವನ್ನು ಭಾಗಾಂಶ ರೂಪದಲ್ಲಿ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಹೆಚ್ಚುವರಿ ಮುಖ್ಯ

ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ಶುದ್ಧ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನಿಡಿ-5 ರ ಪ್ರಕಾರ ಅಮೃತ ಮತ್ತು ಅಶ್ವಿನಿರವರಿಗೆ ಭಾಗಾಂಶದ ದಾವೆಯನ್ನು ಹೂಡಲು ಯಾವುದೇ ನಿರ್ಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಅಮೃತ ಮತ್ತು ಅಶ್ವಿನಿರವರಿಗೆ ಸೇರಿದ ಆಸ್ತಿಯನ್ನು ನಾವು ಕಾನೂನು ಬಾಹಿರವಾಗಿ ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅಮೃತ ಮತ್ತು ಅಶ್ವಿನಿರವರಿಗೆ ಭಾಗಾಂಶ ಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.